(ಒಟ್ಟಿಗೆ ನಾಲ್ಕೈದು ಜನ ಸದಸ್ಯರು ಎದ್ದು ಅವಕಾಶ ನಿರಾಕರಿಸುವುದನ್ನು ಪ್ರತಿಭಟಿಸಿದರು)

ಅಧ್ಯಕ್ಷರು.— ಶ್ರೀಮಾನ್ ಪಿ. ರಾಮದೇವರವರ ಕ್ಷೇತ್ರ ಯಾವುದು ಎಂಬುದು ನನಗೆ ಗೊತ್ತಿದೆ. ಶ್ರೀಮಾನ ಚೆಂದ್ರಶೆಖೀರ್‌ರವರ ಕ್ಷೇತ್ರ ಯಾವುದು ಎಂಬುದೂ ನನಗೆ ಗೊತ್ತಿದೆ. ಸಮಯ ಕಡಿಮೆ ಇರುವುದರಿಂದ ಎಲ್ಲರಿಗೂ ಪ್ರಶ್ನೆ ಕೇಳುವುದಕ್ಕೆ ಅವಕಾಶ ಕೊಡಲು ಸಾಧ್ಯವಾಗುವುದಿಲ್ಲ. ಸಮಯ ಇದ್ದರೆ ಎಲ್ಲರಿಗೂ ಅವಕಾಶ ಕೊಡೋಣ. ಆದೇ ರೀತಿ ಸಮಯವನ್ನೂ ನೋಡಬೇಕಲ್ಲ. ಈಗಾಗಲೇ ಕೆಲವರು ಒಂದು ಗಂಟೆಗಿಂತ ಜಾಸ್ತಿ ಸಮಯವನ್ನು ಪ್ರಶ್ನೋತ್ತರದಲ್ಲೇ ಕಳೆಯುತ್ತಾರೆನ್ನುವ ಟೀಕೆ ನಡೆಯುತ್ತಿದೆ. ನಮ್ಮ ಕಷ್ಟ ನಿಮಗೆ ಗೊತ್ತಾಗುವುದಿಲ್ಲ.

Hogenakal Power Project

323 SRI. M.C. BASAPPA (Chamarajanagar) Will the State Minister for Information and Youth Services be pleased to state :—

(*a*) Whether Government of Karnataka proposes to take up the construction of Hogenakal Power Project ;

(*b*) if so, the stage at which proposals are pending ;

(*c*) if not, the reasons for not taking up the Project ?

SRI. K. H. SRINIVAS (Minister of State for Information and Youth Service)

(*a*) Government of Karnataka has plans to take up Power Development Projects in the Cauvery basin without detriment to the States interests.

(*b*) Detailed investigations in this regard are being carried out.

(*c*) Does not arise.

ಶ್ರೀ ಎಂ.ಸಿ. ಬಸಪ್ಪ :—ನನ್ನ (ಅ) ಪ್ರಶ್ನೆಗೆ ಉತ್ತರವಾಗಿ ಮಾನ್ಯ ಮಂತ್ರಿಗಳು ರಾಜ್ಯದ ಹಿತಾಸಕ್ತಿಗೆ ಹಾನಿಯಾಗದಂತೆ ಕಾವೇರಿ ಜಲಾನಯನದ ಪ್ರದೇಶದಲ್ಲಿ ಹೊಗೆನಕಲ್ ವಿದ್ಯುತ್ ಅಭಿವೃದ್ಧಿ ಯೋಜನೆಯನ್ನು ಕೈಕೊಳ್ಳಲು ಕರ್ನಾಟಕ ಸರ್ಕಾರ ಉದ್ದೇಶಿಸಿದ್ದಾರೆಂಬುದಾಗಿ ಹೇಳಿದ್ದೀರಿ. ಆದರೆ ನಮಗೂ ಹಾಗೂ ತಮಿಳುನಾಡಿನವರಿಗೂ ಕಾವೇರಿ ನೀರಿನ ಪಂಚಿಕೆ ಬಗ್ಗೆ ಕಾಂಟ್ರವರ್ಸಿ ಇರುವುದರಿಂದ ಈ ಯೋಜನೆಯನ್ನು ತನಿಖೆ ಮಾಡಲು ಎರಡು ರಾಜ್ಯಗಳು ಸೇರಿಕೊಂಡು ಮಾಡುತ್ತಿವೆಯೋ ಅಥವಾ ನಮ್ಮ ರಾಜ್ಯ ಒಂದೇ ತನಿಖೆ ಮಾಡುತ್ತಿದೆಯೇ ?

ಶ್ರೀ ಕೆ.ಎಚ್. ಶ್ರೀನಿವಾಸ್.— ಈಗ ಕಾವೇರಿ ಬೇಸಿನ್‌ನಲ್ಲಿ ವಿದ್ಯುತ್ ಉತ್ಪಾದನೆಯ ಬಗ್ಗೆ ಕರ್ನಾಟಕಕ್ಕೆ ಅನುಕೂಲವಾಗುವಂತಹ ರೀತಿಯಲ್ಲಿ ತನಿಖೆ ಮಾಡುತ್ತಿದ್ದೇವೆ. ಹಾಗೆಯೇ ತಮಿಳುನಾಡಿನವರೂ ಕೂಡ ಮಾಡುತ್ತಿದ್ದಾರೆ. ಇದು ಬಾರ್ಡರ್‌ನಲ್ಲಿರುವುದರಿಂದ ಅವರು ತನಿಖೆ ಮಾಡಿ ಪ್ರಾಜೆಕ್ಟ್ ತಯಾರು ಮಾಡಿದರೂ ಕೂಡ ಅದು ಆಗಬೇಕಾದರೆ ಕರ್ನಾಟಕದ ಜೊತೆಯಲ್ಲಿ ಸಹಕರಿಸಿಕೊಂಡು ಹೊಂದಾಣಿಕೆ ಆಗಬೇಕು. ಆದರಲ್ಲಿ ಕರ್ನಾಟಕಕ್ಕೂ ಲಾಭ ಸಿಕ್ಕಬೇಕು. ನಮ್ಮ ಮಾಸ್ಟರ್ ಪ್ಲಾನಿನಲ್ಲೂ ಹೊಗೆನೆಕಲ್ ಹತ್ತಿರ ಒಂದು ಸಣ್ಣ ಡ್ಯಾಂ ಬರುತ್ತದೆ ಎಂಬುದಾಗಿ ತನಿಖೆ ಮಾಡಿದ್ದಾರೆ. ಮುಖ್ಯವಾಗಿ ಈ ಪ್ರಶ್ನೆ ನಮಗೂ ತಮಿಳುನಾಡಿನವರಿಗೂ ಇರುವ ನೀರಿನ ಹಂಡಿಕೆಯ ತೀರ್ಮಾನವನ್ನು ಅವಲಂಬಿಸಿರುವುದರಿಂದ ಈಗ ಯಾವ ವಿವರಗಳನ್ನು ಇಲ್ಲಿ ನಾವು ಎತ್ತುವುದರಿಂದ ಅಥವಾ ಅದನ್ನು ಹೇಳುವುದರಿಂದ ಯಾವ ಪ್ರಯೋಜನವೂ ಇಲ್ಲ. ಆದ್ದರಿಂದ ಕಾವೇರಿ ನೀರಿನ ಪಂಚಿಕೆ ಹೇಗೆ ಆಗಬಹುದು ಅಥವಾ ಹಾಗೆ ಆಗಬಹುದು ಎಂಬ ಲೆಕ್ಕಾಚಾರದಮೇಲೆ ತಮಿಳುನಾಡಿನವರು ತನಿಖೆ ಮಾಡುತ್ತಿದ್ದಾರೆ. ನಾವೂ ಕೂಡ ತನಿಖೆ ಮಾಡುತ್ತಿದ್ದೇವೆ.

ಶ್ರೀ ಎಂ.ಸಿ. ಬಸಪ್ಪ.— ಎರಡು ರಾಜ್ಯಗಳು ಬೇರೆ ಬೇರೆಯಾಗಿ ತನಿಖೆ ಮಾಡುತ್ತಿದ್ದಾರೆಂದು ಹೇಳಿದಿರಿ. ಮೊನ್ನೆ ತಾನೆ ತಾವು ಒಂದು ಪತ್ರಿಕಾ ಹೇಳಿಕೆ ಕೊಟ್ಟಿದ್ದೀರಿ. ಅದರಲ್ಲಿ ಕರ್ನಾಟಕ ರಾಜ್ಯ ಹಾಗೂ ಮದ್ರಾಸ್ ರಾಜ್ಯಗಳ ಸಹಕಾರ ಬೇಕು ಎಂಬುದು ತಾಂತ್ರಿಕ ಸಿಬ್ಬಂದಿಯ ಅಭಿಪ್ರಾಯ ಇದೆ. ಇದರ ಬಗ್ಗೆ ಅನುಕೂಲವಾದರೆ ಇದನ್ನು ತೆಗೆದುಕೊಳ್ಳುತ್ತೇವೆ ಎನ್ನುವ ಅಭಿಪ್ರಾಯವನ್ನು ತಾವು ವ್ಯಕ್ತಪಡಿಸಿದ್ದೀರಿ. ಇದರ ಬಗ್ಗೆ ನಿಮ್ಮ ಅಭಿಪ್ರಾಯವೇನು ?

ಶ್ರೀ ಕೆ.ಎಚ್. ಶ್ರೀನಿವಾಸ್.— ಕರ್ನಾಟಕ ಮತ್ತು ಮದ್ರಾಸ್ ರಾಜ್ಯಗಳ ಸಹಕಾರದ ಮೇಲೆ ಈ ಯೋಜನೆಯನ್ನು ತೆಗೆದುಕೊಳ್ಳುತ್ತೇವೆಂದು ನಾನು ಹೇಳಲಿಲ್ಲ. ನನ್ನ ಪತ್ರಿಕಾ ಹೇಳಿಕೆಯ ಬಗ್ಗೆ ಆಮೇಲೆ ಅದಕ್ಕೆ ಸ್ಪಷ್ಟೀಕರಣ ಸಹ ಕೊಟ್ಟಿದ್ದೇನೆ. ಏನಾಯಿತು ಎಂಬುದನ್ನು ವಿವರವಾಗಿ ಹೇಳಿದ್ದೇನೆ. ಚರ್ಚೆಯ ಸಂದರ್ಭದಲ್ಲಿ ತಮಿಳುನಾಡಿನವರು ಹೊಗೆನಕಲ್ ಯೋಜನೆಯ ವಿಷಯವಾಗಿ ಇನ್‌ವೆಸ್ಟಿಗೇಷನ್ ಮಾಡಿಸಿದ್ದವಾಗಿಟ್ಟುಕೊಂಡಿದ್ದೇವೆ ಎನ್ನುವ ಮಾತನ್ನು ಹೇಳಿದರು. ಹಾಗೂ ನದಿಯ ನೀರಿನ ಹಂಚಿಕೆ ಬಗ್ಗೆ ಇತ್ಯರ್ಥವಾದರೆ ಇನ್ನೂ ಸ್ವಲ್ಪ ನೀರು ನಮಗೆ ಸಿಕ್ಕಬಹುದು. ಎಂಬುದು ಅವರ ಊಹೆ. even it may be run of the river. ಆದ್ದರಿಂದ ಪ್ರಾಜೆಕ್ಟ್ ಇನ್‌ವೆಸ್ಟಿಗೇಷನ್ ಮಾಡುವುದಕ್ಕೆ ಏನು ಅಭ್ಯಂತರವನ್ನು ನಾವು ತೆಗೆದುಕೊಳ್ಳದಿದ್ದರೆ ಇನ್‌ವೆಸ್ಟಿಗೇಷನ್ ತಯಾರುಮಾಡಿಕೊಂಡು ಇರುತ್ತೇವೆಂದು ಹೇಳಿದರು.

Proposing to delink hogenkal project from the main issue of shaing cauvery waters. While this was a reasonable suggestion, the feasability willhave to be decided only by experts. ಆದ್ದರಿಂದಲೇ ಅವರು ಮಂತ್ರಿಗಳ ಮಟ್ಟದಲ್ಲಿ ಚರ್ಚೆ ಅಪೇಕ್ಷಿಸಿದ್ದಾಗ್ಯೂ ವಿಷಯ ತಜ್ಞರ ಮಟ್ಟದಲ್ಲಿ ಚರ್ಚೆಯಾಗಲೆಂದು ನಾನು ಹೇಳಿದೆ. ಇಷ್ಟು ಹೊರತು, ಇನ್ನು ಯಾವುದೇ ನಿರ್ಧಾರವನ್ನು ಮಾಡಿಲ್ಲ.

ಶ್ರೀ ಎಂ. ಸಿ. ಬಸಪ್ಪ. – ಸ್ವಾಮಿ, ನನ್ನ ಎರಡನೇ ಪ್ರಶ್ನೆಗೆ ಈ ಬಗ್ಗೆ ವಿವರವಾದ ತನಿಖೆಗಳನ್ನು ನಡೆಸಲಾಗುತ್ತಿದೆ ಎಂದು ಹೇಳಿದ್ದೀರಿ. ಇದು ಬಹಳ ಹಿಂದಿನಿಂದ ಯೋಜನೆಮಾಡಿ ಮಾಡುತ್ತಿರತಕ್ಕ ಪ್ರಾಜೆಕ್ಟಾಗಿರುವುದರಿಂದ ನೀವು ಮದ್ರಾಸಿಗೆ ಹೋಗಿ ಬಂದಮೇಲೆ ತಕ್ಷಣ ಈ ಯೋಜನೆ ಕಾರ್ಯ ಮಾಡಬೇಕು ಎಂದು ಆಜ್ಞೆ ಮಾಡಿದ್ದೀರಾ ಮತ್ತು ಇದು ಎಷ್ಟು ದಿವಸದಿಂದ ಪೆಂಡಿಂಗ್ ಇದೆ ?

೧೮-೦೦ ಎ.ಎಂ.

ಶ್ರೀ ಕೆ.ಎಚ್. ಶ್ರೀನಿವಾಸ. – ತನಿಖೆ ಸಾಕಷ್ಟು ಆಗಿದೆ. ಸಾಕಷ್ಟು ಬದಲಿ ಪ್ಲಾನ್ಸ್ ಕೂಡ ಇದೆ. ಆದರೆ ಕಾವೇರಿ ನೀರಿನ ಹಂಚಿಕೆ ಯಾವರೀತಿ ಆಗುತ್ತದೆ. ಎಂಬುದು ಇನವೆಸ್ಟಿಗೇಷನ್ ಮೇಲೆ ಪರಿಣಾಮ ಬಾಗುತ್ತದೆ. ಟೆಂಟೆಟೀವ್ ಪ್ಲಾನ್ ನಿಲ್ಲುತ್ತದೆ. ಎಂದು ಹೇಳುವುದಕ್ಕಾಗುವುದಿಲ್ಲ. ಆದ್ದರಿಂದ ಇನವೆಸ್ಟಿಗೇಷನ್ ಮಾಡುತ್ತಿದ್ದೇವೆ ಎಂದು ಉತ್ತರ ಕೊಟ್ಟಿದ್ದೇವೆ.

ಶ್ರೀ ಎಸ್. ಆರ್. ಬೊಮ್ಮಾಯಿ. – ಮಾನ್ಯ ಮಂತ್ರಿಗಳು ಮುಖ್ಯಮಂತ್ರಿಗಳು ಬೇರೆ ರಾಜ್ಯದಲ್ಲಿ ಪ್ರವಾಸ ಮಾಡುವಾಗ ಕೆಲವು ವಿಚಾರಗಳ ಬಗ್ಗೆ ಮೊದಲು ಪತ್ರಿಕಾ ಹೇಳಿಕೆಗಳನ್ನು ಕೊಟ್ಟು ಪುನ: ನಾನು ಆ ರೀತಿ ಹೇಳಿಲ್ಲ ಎಂದು ಎಕ್ಸ್‌ಪ್ಲನೇಷನ್ ಕೊಡುತ್ತಾರೆ. ಬೇರೆ ರಾಜ್ಯದಲ್ಲಿದ್ದಾಗ ಅವರನ್ನು ಖುಷಿ ಮಾಡುವ ದೃಷ್ಟಿಯಿಂದಲೋ ಅಥವಾ ಯಾವುದೋ ಪಬ್ಲಿಸಿಟಿ ಪಡೆಯುವ ದೃಷ್ಟಿಯಿಂದಲೋ ವಿವಾದಾಸ್ಪದವಾದ ವಿಚಾರಗಳ ಬಗ್ಗೆ ಹೇಳಿಕೆ ಕೊಡುತ್ತೀರಿ. ಇಂಥ ವಿವಾದಾತ್ಮಕವಾದ ವಿಚಾರಗಳ ಬಗ್ಗೆ ಆದಷ್ಟು ಹೇಳಿಕೆಗಳನ್ನು ಕೊಡದೇ ಇರುವುದು ಒಳ್ಳೆಯದಲ್ಲವೇ ?

ಶ್ರೀ ಕೆ.ಎಚ್ ಶ್ರೀನಿವಾಸ್. - ವಿವಾದಾಸ್ಪದವಾದ ವಿಚಾರಗಳ ಬಗ್ಗೆ ಹೇಳಿಕೆ ಕೊಡದಿರುವುದು ಒಳ್ಳೆಯದು. ನಾವೂ ಕೂಡ ಆ ಬಗ್ಗೆ ಸಾಕಷ್ಟು ನಾನ್–ಕಾಂಟ್ರವರ್ಸಿಯಲ್ಲಾಗೇ ಉತ್ತರ ಕೊಟ್ಟಿದ್ದೇವೆ. ಎಷ್ಟೋ ಸಂದರ್ಭಗಳಲ್ಲಿ ಅವರು ಏನಾದರೂ ಹೇಳಿದಾಗ ಉದಾಹರಣೆಗೆ ಹೊಗೆನಕಲ್ ಬಗ್ಗೆ ಕೇಳಿದಾಗ ನಾವು ಏನು ಹೇಳದೆ ಶಾಂತಂ ಪಾಪ ಎಂದು ಹೇಳುವುದಕ್ಕಾಗುವುದಿಲ್ಲ. ವಿಷಯ ಏನು ಎಂದು ಕೇಳಬೇಕಾಗುತ್ತದೆ. ನನ್ನ ಮೊದಲನೇ ಪತ್ರಿಕಾ ಹೇಳಿಕೆಯನ್ನು ನೋಡಿದರೂಕೂಡ ಗೊತ್ತಾಗುತ್ತದೆ, ಅದರಲ್ಲಿ ಯಾವಲೋಪವನ್ನೂ ಮಾಡಿಲ್ಲ. ಅದಕ್ಕೆ ಬೇರೆ ಅರ್ಥನಿರೂಪಣೆ ಕೊಟ್ಟಿದ್ದರಿಂದ ಮತ್ತೆ ವಿವರಣೆ ಕೊಡಬೇಕಾಯಿತು.

ಶ್ರೀ ಪಿ. ರಾಮದೇವ್. – ಪ್ರಿಲಿಮಿನರಿ ಇನ್‌ವೆಸ್ಟಿಗೇಷನ್‌ಗೆ ಎಷ್ಟು ಹಣ ಮಂಜೂರಾಗಿತ್ತು ? ಮತ್ತು ಎಷ್ಟು ಹಣ ಖರ್ಚು ಮಾಡಿದ್ದೀರಿ ?

ಶ್ರೀ ಕೆ.ಎಚ್. ಶ್ರೀನಿವಾಸ್. – ಆ ವಿವರಗಳು ಇಲ್ಲಿಲ್ಲ.

ಶ್ರೀ ಎಚ್.ಡಿ. ದೇವೇಗೌಡ. – ಹೊಗೇನಕಲ್ ವಿದ್ಯುಚ್ಛಕ್ತಿ ಯೋಜನೆ ತೆಗೆದುಕೊಳ್ಳುವುದಕ್ಕೆ ನೀರಿನ ಪಂಚಿಕೆ ಮೇಲೆ ಅವಲಂಬನೆಯಾಗಿದ್ದೇವೆ ಎಂದು ಹೇಳಿದ್ದಾರೆ. ಮೊನ್ನೆ ಪಂಚಾಯ್ತಿಮಂತ್ರಿಗಳು ತಮಿಳುನಾಡಿನಲ್ಲಿ ಪ್ರವಾಸ ಮಾಡುವಾಗ ನೀರಿನ ಪಂಚಿಕೆ ಬಗ್ಗೆ ಕೇಂದ್ರದ ಪ್ರವೇಶದ ಅವಶ್ಯಕತೆ ಇಲ್ಲ, ಎರಡೂ ರಾಜ್ಯಗಳು ಸೇರಿ ನೀರಿನ ಪಂಚಿಕೆ ಬಗ್ಗೆ ಇತ್ಯರ್ಥ ಮಾಡಿಕೊಳ್ಳುತ್ತೇವೆ ಎಂದು ಹೇಳಿದ್ದಾರೆ. ಅಂದರೆ ಕೇಂದ್ರದ ಪ್ರವೇಶ ಬೇಕಾಗಿಲ್ಲ ಎಂಬುದು ರಾಜ್ಯಸರ್ಕಾರದ ಧೋರಣೆಯೇ ಅಥವಾ ತಪ್ಪು ನೀತಿಯೇ ಮತ್ತು ತಾವು ಮತ್ತು ತಮಿಳುನಾಡು ಸರ್ಕಾರದವರು ಇದನ್ನು ತೀರ್ಮಾನ ಮಾಡಿಕೊಳ್ಳುವುದಕ್ಕೆ ಸಮಸ್ಯೆಯೇನೂ ಇಲ್ಲವೇ ಅಥವಾ ಹಾದಿತಪ್ಪಿದ್ದೀರಾ ? ದಯಮಾಡಿ ತಿಳಿಸಿ.

ಶ್ರೀ ಕೆ.ಎಚ್. ಶ್ರೀನಿವಾಸ್. – ಆ ರೀತಿಯ ಸಮಸ್ಯೆ ಉಂಟಾಗಿರತಕ್ಕದ್ದು ನನ್ನ ಗಮನಕ್ಕೇನೂ ಬಂದಿಲ್ಲ.

Vacant posts in Hospitals of Coorg District

343. SRI M.C. NANAIAH (Madikeri).—Will the Minister for Health and Family Welfare be pleased to state:—

(*a*) the total number of vacant posts of doctors both male and female in the Hospitals in Coorg District ;

(*b*) the Steps taken by Government to fill up the vacancies?

SRI B. SUBBAIAH SHETTY (Minister for Education) [On behalf of SRI M. MALLAPPA (Minister for Health and Family Welfare)].—

(*a*) (1) Male.....1
(2) Female.....5

(*b*) Apart from taking action to fill up posts through Public Service Commission even for filling up these posts through Local candidates, the response particularly from Lady Doctors is very poor.

SRI M. C. NANAIAH.—It is common knowledge that the appointments are being held up on account of the delay by the Public Service Commission. In respect of appointment of Munsiffs Government has taken a decision to constitute a committee. Is it not possible for the Government to appoint a committee in the matter of appointment of these doctors also when there are so many unemployed doctors in the State of Karnataka?

† SRI B. SUBBIAH SHETTY.—That decision has not been taken by Government yet. The question here is regarding 5 posts of lady doctors which are vacant in Coorg District. Whenever we post lady medical officers, usually they do not go to the posted places. So, it was tried to recruit them locally. Then also we were not able to get lady candidates to be posted there. However, Government are trying their level best to get lady doctors and post them to Kodagu.